ಅಂಗಡಿಯ ಬಾಗಿಲು ಮುಚ್ಚಿ ಮನೆಯಲ್ಲಿಯೇ ಕುಳಿತುಬಿಟ್ಟಿದ್ದ. ಸುನಂದಾ ನಿಧಾನವಾಗಿ ಲಕ್ಷ್ಮಿಕೇಶವರಿಗೆ ಹೊಂದಿಕೊಂಡಳು. ಸುನಂದಾಳಿಗೆ ಕೇಶವ ಡ್ಯಾಡಿಯೂ ಲಕ್ಷ್ಮಿ ಮಮ್ಮಿಯೂ ಆಗಿ ಊರಿನ ಅವ್ವ ಅಪ್ಪ ನೆನಪಿನ ಭಿತ್ತಿಯಿಂದ ಮಾಸಿಹೋದರು. ಲಕ್ಷ್ಮಿ ಕೇಶವ ಮಲಗುವಾಗ ಸುನಂದಾಳನ್ನು ತಮ್ಮ ನಡುವೆ ಮಲಗಿಸಿಕೊಂಡು ಸ್ವಂತ ಮಗಳಿಗಿಂತ ಹೆಚ್ಚಾದ ಪ್ರೀತಿವಾತ್ಸಲ್ಯ ತೋರತೊಡಗಿದರು. ಮಕ್ಕಳಿಲ್ಲವೆಂಬ ನೋವು ಅವರ ಮನಸ್ಸಿನಿಂದ ಮಾಯವಾಗಿ ಅವರ ಮನೆ ಮತ್ತು ಮನದಲ್ಲಿ ನೆಮ್ಮದಿ ನೆಲೆಯೂರಿತು. ಸುನಂದಾಳನ್ನು ಮತ್ತೆ ಪಟ್ಟಲದಮ್ಮನ ಜಾತ್ರೆಯವರೆಗೆ ಊರಿಗೆ ಕರೆದುಕೊಂಡು ಹೋಗಲಿಲ್ಲ. ಕೃಷ್ಣೇಗೌಡ ಸಂಪಿಗಮ್ಮನೂ ಮಗಳು ನಮ್ಮನ್ನು ಕಂಡು ಜರೆದುಕೊಂಡಾಳೆಂದು ಕೇಶವನ ಮನೆಗೂ ಹೋಗಲಿಲ್ಲ.

ಲಕ್ಷ್ಮಿ ಕೇಶವರು ಇಪ್ಪತು ಸಾವಿರ ಡೊನೇಷನ್ ತೆತ್ತು ಸುನಂದಾಳನ್ನು ಇಂಗ್ಲೀಷು ಮಾಧ್ಯಮದ ಪ್ರತಿಷ್ಠಿತ ಶಾಲೆಯಲ್ಲಿ ಎಲ್.ಕೆ.ಜಿಗೆ ಸೇರಿಸಿದರು. ಸುನಂದಾಳ ಜಡೆಯನ್ನು ತುಂಡವಾಗಿಸಿ ಬಾಬ್ ಕಟ್ ಮಾಡಿಸಿದರು. ಹೊಸ ಯೂನಿಫಾರ್ಮ, ಹೊಸ ಶೂ, ಟೈಗಳಿಂದ ಅಲಂಕೃತಳಾದ ಸುನಂದಾಳ ರೂಪವೇ ಬದಲಾಗಿ ಲಕ್ಷ್ಮಿ ಕೇಶವರ ಕಣ್ಣಿಗೆ ಮೊದಲೇ ಮುದ್ದಾಗಿದ್ದ ತಮ್ಮ ಮಗಳು ಇನ್ನಷ್ಟು ಮುದ್ದಾಗಿ ಕಾಣತೊಡಗಿದಳು. ಲಕ್ಷ್ಮಿ ಅವಳನ್ನು ಎತ್ತಿಕೊಂಡೇ ಸ್ಕೂಲು ಬಸ್ಸು ಹತ್ತಿಸುವುದು, ಕಾಯ್ದುಕೊಂಡಿದ್ದು ಬಸ್ಸಿನಿಂದ ಇಳಿಸಿ ಎತ್ತಿಕೊಂಡು ಮುದ್ದಿಸಿ ಮನೆಗೆ ಕರೆತರುವುದು ಮಾಡುತ್ತಿದ್ದಳು. ಮನೆಯಲ್ಲಿ ಯಾವಾಗಲೂ ಲಕ್ಷ್ಮಿ ಸುನಂದಾಳನ್ನು ತನ್ನ ಮಡಿಲಿನಲ್ಲಿಯೇ ಕುಳ್ಳಿರಿಸಿಕೊಂಡಿರುತ್ತಿದ್ದಳು. ಅವಳಿಗೆ ತಾನು ಕಳೆದುಕೊಂಡಿದ್ದ ತಾಯ್ತನದ ಸಂಭ್ರಮಗಳು ದೊರಕಿದವು ಎನಿಸಿ ಇನ್ನಿಲ್ಲದ ಸಂತೋಷವಾಗಿತ್ತು. ಸುನಂದಾಳೂ ಲಕ್ಷ್ಮಿಯನ್ನು ಮಮ್ಮಿ, ಮಮ್ಮಿ ಎಂದು ಕರೆಯುತ್ತಾ ಅವಳ ಹಿಂದೆ ಹಿಂದೆಯೇ ಓಡಾಡಿಕೊಂಡು ಕೇಶವ ಅಂಗಡಿಯಿಂದ ಬಂದೊಡನೆ ಡ್ಯಾಡಿ ಬಂದ್ರು ಎಂದು ಹಾರಿ ಅವನ ಕುತ್ತಿಗೆಗೆ ಜೋತುಬೀಳುತ್ತಿದ್ದುದನ್ನು ಕಂಡು ಲಕ್ಷ್ಮಿ ಕೇಶವರಿಗೆ ಪರಮಾನಂದವಾಗುತ್ತಿತ್ತು. ಹತ್ತಿರದ ಸಂಬಂಧಿಕರು, ಸುತ್ತಮುತ್ತಲಿನ ಮನೆಯವರನ್ನು ಹೊರತುಪಡಿಸಿ ಬೇರೆ ಯಾರಿಗೂ ಸುನಂದಾ ಕೇಶವನ ಸ್ವಂತ ಮಗಳಲ್ಲ ಎಂಬುದು ತಿಳಿದಿರಲಿಲ್ಲ.

ಸುನಂದಾ ಮನೆಗೆ ಬಂದ ಮೇಲೆ ಕೇಶವನ ಅಂಗಡಿಯ ವ್ಯಾಪಾರವೂ ವೃದ್ಧಿಯಾಯಿತು. ಸಣ್ಣ ಅಂಗಡಿ ದೊಡ್ಡ ಅಂಗಡಿಯಾಗಿ ಪರಿವರ್ತಿತವಾಗಿ ಕೈತುಂಬಾ ಹಣವೂ ಸೇರತೊಡಗಿತು. ಬಾಡಿಗೆ ಮನೆಯಲ್ಲಿದ್ದ ಕೇಶವ ಮೂರ್ನಾಲ್ಕು ವರ್ಷಗಳ ನಂತರ ಹೊಸ ಬಡಾವಣೆಯೊಂದರಲ್ಲಿ ನಿವೇಶನವೊಂದನ್ನು ಖರೀದಿಸಿದ. ಲಕ್ಷ್ಮಿಕೇಶವರ ಪ್ರೀತಿಯ ಆಸರೆಯಲ್ಲಿ ಸುನಂದಾ ದಿನ ಕಳೆದಂತೆಲ್ಲಾ ತನ್ನ ತಾಯಿಯಂತೆ ಎತ್ತರವಾಗಿ ಮೈಕೈ ತುಂಬಿಕೊಂಡು ಸುಂದರ ಬಾಲೆಯಾಗಿ ಬೆಳೆಯತೊಡಗಿದಳು. ಶಾಲೆಯಲ್ಲಿಯೂ ಯಾವಾಗಲೂ ಉತ್ತಮ ಅಂಕಗಳನ್ನು ಪಡೆದು ಪಾಸಾಗುತ್ತಿದ್ದಳು. ಇದನ್ನೆಲ್ಲಾ ಕಂಡು ಲಕ್ಷ್ಮಿ ಕೇಶವರಿಗೆ ತಮ್ಮ ಶ್ರಮ ಸಾರ್ಥಕವಾಯಿತೆಂದು ಸಂತಸವಾಗುತ್ತಿತ್ತು. ಸುನಂದಾಳ ಮುಂದಿನ ಓದಿಗೆ, ಮದುವೆ ಮಾಡಲು ಬೇಕಾದ ಖರ್ಚುವೆಚ್ಚಗಳಿಗೆಂದು ಹಣವನ್ನು ಕೂಡಿಡತೊಡಗಿದರು. ಲಕ್ಷ್ಮಿ ಆಗಾಗ ಮಗಳ ಭವಿಷ್ಯಕ್ಕೆಂದು ಒಂದಷ್ಟು ಚಿನ್ನದ ಆಭರಣಗಳನ್ನು ಖರೀದಿಸತೊಡಗಿದಳು. ಅನುಪಮ ಸುಂದರಿಯಂತಿದ್ದ ನನ್ನ ಮಗಳನ್ನು ಚೆನ್ನಾಗಿ ಓದಿಸಿ, ಒಳ್ಳೆಯ ಕೆಲಸದಲ್ಲಿರುವ ಹುಡುಗನನ್ನು ಹುಡುಕಿ ಮದುವೆ ಮಾಡಬೇಕು ಎಂದೆಲ್ಲಾ ಕನಸು ಕಾಣತೊಡಗಿದ್ದಳು. ಕೇಶವ, ಇರುವವರು